## ಮಯೂರ ವಿಶೇಷ

# ಒಡಕಲು ಬಿಂಬದಲ್ಲಿ ಕಂಡ ಪ್ರೇಮಮಯಿ ಆಂಟಿ

**ಬಾನು ಮುಷ್ತಾಕ್** ಅಪ್ರಕಟಿತ ಆತ್ಮಕತೆಯ ಒಂದು ಭಾಗ. ಶಿವಮೊಗ್ಗದ ‘ಅಹರ್ನಿಶಿ’ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಲಿದೆ.

ಆಂಟಿಯದೊಂದು ವಿಚಿತ್ರ ಕಥೆ. ನಮ್ಮ ಅಜ್ಜ ಶಾ ಅಲಿ ಸಾಹೇಬರಿಗೆ ಅಬ್ದುಲ್ ಕರೀಮ್ ಸಾಬ್ ಎಂಬ ಹೆಸರಿನ ಒಬ್ಬ ತಮ್ಮ ಹಾಗೂ ಮೂವರು ಸಹೋದರಿಯರು ಇದ್ದರು. ಆ ತಂಗಿಯರ ಪೈಕಿ ಹಿರಿಯಾಕೆಯನ್ನು ಕಣಿಯಾರ್‌ಗೆ ಮದುವೆ ಮಾಡಿಕೊಟ್ಟಿದ್ದರು. ನನಗೆ ಪ್ರಜ್ಞೆ ಬರುವ ವೇಳೆಗೆ ಆಕೆ ಮೃತಪಟ್ಟಿದ್ದರಿಂದ ನನಗೆ ಆಕೆಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಜಮಾಲ್ ಬೀ ಮತ್ತು ಹಾಫಿಜಾ ಬೀ ಎಂಬ ಹೆಸರಿನ ಇನ್ನಿಬ್ಬರು ತಂಗಿಯರಲ್ಲಿ; ಜಮಾಲ್ ಬೀಯನ್ನು ಆಲೂರು ತಾಲ್ಲೂಕು ಮಗ್ಗೆ ಹೋಬಳಿಯ ನೆಲ್ಲಿಗೆರೆ ಗ್ರಾಮದ ಒಬ್ಬ ಯುವಕನಿಗೆ ಕೊಟ್ಟು ಮದುವೆ ಮಾಡಿದ್ದರು. ಆದರೆ ಆ ವ್ಯಕ್ತಿ ಮದುವೆ ಆದ ಒಂದು ವರ್ಷದೊಳಗಾಗಿ ಮೃತಪಟ್ಟಿದ್ದರಿಂದ ಜಮಾಲ್ ಬೀ ಬಾಲವಿಧವೆಯಾಗಿ ತನ್ನ ಹದಿನಾಲ್ಕನೇ ವಯಸ್ಸಿಗೆ ವೈಧವ್ಯದ ಹೊರೆಯನ್ನು ಹೊತ್ತು ತವರು ಮನೆಗೆ ಮರಳಿದ್ದಳು. ಹಾಫಿಜಾ ಬೀ ಅಗಲ ಕಂಗಳ, ಗೌರವರ್ಣದ, ಮಾರುದ್ದ ತಲೆಗೂದಲಿನ ಚೆಲುವೆ. ನನ್ನ ತಾತನಾದ ಹಯಾತ್ ಸಾಹೇಬರು (ನನ್ನ ತಾಯಿಯ ತಂದೆ) ತಮ್ಮ ಬಂಧುಗಳ ಮದುವೆಗೆಂದು ಅಬ್ಬೂರು ಮಾಚಗೋಡನಹಳ್ಳಿಗೆ ಹೋಗಿದ್ದರು. ಸಾಲಾಗಿ ಕಟ್ಟಿಕೊಂಡು ಹೋಗಿದ್ದ ಎತ್ತಿನ ಗಾಡಿಗಳ ಉತ್ಸಾಹದ ಪಯಣ ಮತ್ತು ಮದುವೆಯ ಸಂಭ್ರಮದ ನಡುವೆಯೂ ಹಯಾತ್ ಸಾಹೇಬರ ಕಣ್ಣಿಗೆ ಚಿಗರೆಯಂತೆ ಎಗರಾಡುತ್ತಿದ್ದ ಬಾಲೆ ಹಾಫಿಜಾ ಬೀ ಕಣ್ಣಿಗೆ ಬಿದ್ದಳು. ಕೂಡಲೇ ಅವರ ಕಣ್ಮುಂದೆ ಸುಳಿದವನು ತಮ್ಮ ತಮ್ಮ ಸೈಯದ್ ಗಫಾರ್. ಆತನಿಗೆ ವಧುವಾಗಿ ಈಕೆ ತಕ್ಕ ಜೋಡಿ ಎಂದು ಕ್ಷಣಾರ್ಧದಲ್ಲಿ ನಿರ್ಧರಿಸಿದ ಅವರು ಆಕೆಯ ಅಣ್ಣ ಷಾ ಅಲಿ ಸಾಹೇಬರನ್ನು ಕಂಡು ಆಕೆಯ ವಿವಾಹದ ಪ್ರಸ್ತಾವನೆಯನ್ನು ಮುಂದಿಟ್ಟಾಗ ಸಹಜವಾಗಿಯೇ ಶಾ ಅಲಿ ಸಾಹೇಬರು ಅದಕ್ಕೆ ಅತ್ಯಂತ ಸಂತೋಷದಿಂದ ಒಪ್ಪಿಗೆ ನೀಡಿದರು.



ಆಡುತ್ತ ಕುಣಿಯುತ್ತ ನಲಿಯುತ್ತಿದ್ದ ಹನ್ನೆರಡರ ಬಾಲೆ ಹಾಫಿಜಾ ಬೀ ಮದುವೆಯ ಬಂಧನಕ್ಕೊಳಗಾಗಿ ಹಾಸನವನ್ನು ಸೇರಿದಳು. ಹಳ್ಳಿಯಿಂದ ಪಟ್ಟಣಕ್ಕೆ ಸೇರಿದ ಹಾಫಿಜಾ ಬೀ ತನ್ನ ಕಾಲ ಮತ್ತು ವಯಸ್ಸಿಗಿಂತ ಹೆಚ್ಚು ಚುರುಕಾಗಿದ್ದಳು. ಹಯಾತ್ ಸಾಹೇಬರ ಮತ್ತು ಅವರ ಪತ್ನಿಯ ಹಾಗೂ ತನ್ನ ಪತಿಯ ಮನವನ್ನು ಅಲ್ಪಕಾಲದಲ್ಲೇ ಗೆದ್ದಳು. ತನ್ನ ಪತಿಯ ಸಹೋದರಿಯರಾದ ಖೈರುನ್ ಬೀ